# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:06-02-2025ರಂದು ಗುರುವಾರ ಪೂರ್ವಾಹ್ನ 11.30 ಘಂಟೆಗೆ ಬೆಂಗಳೂರಿನ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಸಭಾಂಗಣದಲ್ಲಿ ನಡೆದ 2024-25ನೇ ಆರ್ಥಿಕ ವರ್ಷದ ದ್ವಿತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳು.

| ಹಾಜರಾದ ಸದಸ್ಯರು : | ಪದನಾಮ |
| --- | --- |
| 1. ಪ್ರೊ. ಶರತ್ ಅನಂತಮೂರ್ತಿ<br>ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2. ಶ್ರೀಮತಿ ಉಮಾ. ಕೆ<br>ಜಂಟಿ ಕಾರ್ಯದರ್ಶಿಗಳು<br>ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ,<br>ವಿಧಾನಸೌಧ, ಬೆಂಗಳೂರು | ಸದಸ್ಯರು |
| 3. ಶ್ರೀ ಎನ್. ಕುಮಾರ್<br>ಸರ್ಕಾರದ ಉಪಕಾರ್ಯದರ್ಶಿಗಳು<br>(ತಾಂತ್ರಿಕ ಶಿಕ್ಷಣ ಮತ್ತು ಯೋಜನೆ)<br>ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ<br>ಬೆಂಗಳೂರು. | ಸದಸ್ಯರು |
| 4. ಶ್ರೀ ಬಸವರಾಜ. ಎಸ್.<br>ನಿರ್ದೇಶಕರು<br>ಯೋಜನಾ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ<br>ಬೆಂಗಳೂರು. | ಸದಸ್ಯರು |
| 5. ಶ್ರೀ ಶಶಿಧರ್. ಟಿ. ಎನ್<br>ಸಿಂಡಿಕೇಟ್ ಸದಸ್ಯರು | ಸದಸ್ಯರು |
| 6. ಶ್ರೀ ಎ. ಎಲ್. ಮಂಜುನಾಥ್. ಕೆ. ಎ. ಎಸ್. ಸೂಪರ್ ಟೈಮ್ ಸ್ಕೇಲ್<br>ಕುಲಸಚಿವರು (ಆಡಳಿತ) | ಸದಸ್ಯರು |
| 7. ಪ್ರೊ. ಗೋಪಿನಾಥ್. ಎಸ್. ಎಂ.<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 8. ಪ್ರೊ. ಹೆಚ್. ಎನ್. ರಮೇಶ<br>ಹಣಕಾಸು ಅಧಿಕಾರಿ | ಸದಸ್ಯ ಕಾರ್ಯದರ್ಶಿಗಳು |

**ಗೈರುಹಾಜರಾದ ಸದಸ್ಯರು :**

| | |
| --- | --- |
| 1. ಶ್ರೀ. ಡಿ. ಎಸ್. ಅರುಣ್.<br>ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು | ಸದಸ್ಯರು |

ಪ್ರಸ್ತಾವನೆ:

ಪ್ರಾರಂಭದಲ್ಲಿ ಹಣಕಾಸು ಅಧಿಕಾರಿಗಳು 2024-25ನೇ ಸಾಲಿನ ಆರ್ಥಿಕ ವರ್ಷದ ದ್ವಿತೀಯ ಹಣಕಾಸು ಸಮಿತಿ ಸಭೆಯ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಮತ್ತು ಇತರೆ ಸದಸ್ಯರನ್ನು ಸ್ವಾಗತಿಸಿದರು. ನಂತರ ಸಭೆಯ ಅಧ್ಯಕ್ಷರ ಅನುಮತಿಯನ್ನು ಪಡೆದು ಸಭಾ ಕಾರ್ಯಸೂಚಿಯಂತೆ ಕಾರ್ಯಕಲಾಪಗಳನ್ನು ಕೈಗೆತ್ತಿಕೊಳ್ಳಲಾಯಿತು.

| | |
|---|---|
| 2024-ಹಸ:2:1 | ದಿನಾಂಕ:16-10-2024ರಂದು ನಡೆದ 2024-25ನೇ ಹಣಕಾಸು ವರ್ಷದ ಪ್ರಥಮ<br>ಹಣಕಾಸು ಸಮಿತಿ ಸಭೆಯ ನಡಾವಳಿಗಳ ದೃಢೀಕರಣ. |
| ನಿರ್ಣಯ: | ಹಣಕಾಸು ಸಮಿತಿ ಸಭೆಯ ನಡಾವಳಿಗಳ ದೃಢೀಕರಣ.<br>ದಿನಾಂಕ:16-10-2024ರಂದು ನಡೆದ 2023-24ನೇ ಹಣಕಾಸು ವರ್ಷದ ಪ್ರಥಮ<br>ದಿನಾಂಕ:16-10-2024ರಂದು ನಡೆದ 2023-24ನೇ ಹಣಕಾಸು ವರ್ಷದ ಪ್ರಥಮ ಹಣಕಾಸು ಸಮಿತಿ ಸಭೆಯ ವಿಷಯ ಸಂಖ್ಯೆ: 2024-ಹಸ:1:07ರ ನಿರ್ಣಯದಲ್ಲಿ ಹಣಕಾಸು ಸಮಿತಿ ಸಭೆಯ ವಿಷಯ ಸಂಖ್ಯೆ: 2024-ಹಸ:1:07ರ ನಿರ್ಣಯದಲ್ಲಿ<br>ಹಣಕಾಸು ಸಮಿತಿ ಸಭೆಯ ವಿಷಯ ಸಂಖ್ಯೆ: 2024-ಹಸ:1:07ರ ನಿರ್ಣಯದಲ್ಲಿ<br>ಚರ್ಚೆಯ ನಂತರ ಮಾನ್ಯ ಕುಲಪತಿಗಳು ಹಾಗೂ ಕುಲಸಚಿವರು ನೀಡಿರುವ<br>ವಿವರಣೆಯನ್ನು ಸಭೆಯು ಅಂಗೀಕರಿಸಿ ಸರ್ಕಾರದಿಂದ ಸ್ಪಷ್ಟೀಕರಣ ಹಾಗೂ ಮಾಹಿತಿ<br>ಕೋರಿ ಬಂದಿರುವ ಸ್ಥಾಯಿ ಸಮಿತಿಯು ಸಿದ್ಧಪಡಿಸಿರುವ ಪರಿನಿಯಮಗಳನ್ನು<br>ಅನುಮೋದಿಸಿ ನಡಾವಳಿಗಳನ್ನು ಸಭೆಯು ಪರಿಶೀಲಿಸಿ ದೃಢೀಕರಿಸಿತು. |
| 2024-ಹಸ:2:2 | ದಿನಾಂಕ:16-10-2024ರಂದು ನಡೆದ 2024-25ನೇ ಹಣಕಾಸು ವರ್ಷದ ಪ್ರಥಮ<br>ಹಣಕಾಸು ಸಮಿತಿ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ. |
| ನಿರ್ಣಯ: | ದಿನಾಂಕ:16-10-2024ರಂದು ನಡೆದ 2024-25ನೇ ಹಣಕಾಸು ವರ್ಷದ ಪ್ರಥಮ<br>ಹಣಕಾಸು ಸಮಿತಿ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ<br>ವರದಿಯನ್ನು ಸಭೆಯು ಅನುಮೋದಿಸಿತು. |
| 2024-ಹಸ:2:03 | 2021-22ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳ ಅನುಪಾಲನಾ<br>ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವ ಕುರಿತು. |
| ನಿರ್ಣಯ: | 2021-22ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳ ಅನುಪಾಲನಾ<br>ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಹಣಕಾಸು ಅಧಿಕಾರಿಗಳು ಸಭೆಯನ್ನು<br>ಕೋರಿದರು.<br>ಸರ್ಕಾರದ ಪ್ರತಿನಿಧಿಗಳು ಅನುಪಾಲನಾ ವರದಿಯನ್ನು ಪರಿಶೀಲಿಸಿ ಈ ಕೆಳಕಂಡ<br>ವಿಷಯಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ಸಭೆಗೆ ತಿಳಿಸಿದರು:<br>ವಿಶ್ವವಿದ್ಯಾಲಯದ ಶಾಸನಬದ್ಧ ಅಧಿಕಾರಿಗಳಿಗೆ ಸರ್ಕಾರಿ ಆದೇಶದನ್ವಯ ಗೃಹ<br>ಪರಿಚಾರಿಕ ಭತ್ಯೆಯನ್ನು ನೀಡಲು ಅವಕಾಶವಿಲ್ಲದಿದ್ದಾಗ್ಯೂ ಪಾವತಿಸಿರುವುದು<br>ಕಂಡುಬಂದಿರುತ್ತದೆಂದು ತಿಳಿಸಿ, ಸರ್ಕಾರದ ಆದೇಶಕ್ಕೆ ವ್ಯತಿರಿಕ್ತವಾಗಿ ಇದುವರೆಗೂ<br>ಪಾವತಿಸಿರುವ ಮೊತ್ತವನ್ನು ಕೂಡಲೇ ವಸೂಲಾತಿಯನ್ನು ಮಾಡಲು ಸೂಚಿಸಿದರು.<br>ವಸತಿ ಗೃಹವನ್ನು ಹಂಚಿಕೆ ಮಾಡಲಾದ ಶಾಸನಬದ್ಧ ಅಧಿಕಾರಿಗಳ ವೇತನದಿಂದ<br>ಮನೆ ಬಾಡಿಗೆ ಭತ್ಯೆಯನ್ನು ನಿಯಮಾನುಸಾರ ಕಟಾಯಿಸಬೇಕಾಗಿದ್ದು,<br>ಸದರಿಯವರಿಂದ ಮನೆ ಬಾಡಿಗೆ ಕಟಾಯಿಸದಿರುವುದು ಕಂಡು ಬಂದಿರುತ್ತದೆ.<br>ಆದ್ದರಿಂದ ವಸತಿ ಗೃಹ ಹಂಚಿಕೆ ಮಾಡಲಾದ ಅಧಿಕಾರಿಗಳಿಗೆ ಪಾವತಿಸಿರುವ ಮನೆ<br>ಬಾಡಿಗೆ ಭತ್ಯೆಯನ್ನು ವಸೂಲಾತಿ ಮಾಡಲು ಸೂಚಿಸಿದರು.<br>ಇದಲ್ಲದೇ ವಾರ್ಷಿಕ ಲೆಕ್ಕ ಪರಿಶೋಧನೆಯಲ್ಲಿನ ಆಕ್ಷೇಪಣೆ ಮತ್ತು ವಸೂಲಾತಿ<br>ಪ್ರಕರಣಗಳಿಗೆ ಸಂಬಂಧಿಸಿದ ಕಂಡಿಕೆಗಳನ್ನು ಕೂಡಲೇ ಇತ್ಯರ್ಥಪಡಿಸಲು ಸಭೆಯು<br>ಸೂಚಿಸಿತು. |

| | |
|---|---|
| 2024-ಹಸ:1:04 | ವಿಶ್ವವಿದ್ಯಾನಿಲಯದ 2025-2026ನೇ ಸಾಲಿನ ವೇತನ ಭತ್ಯೆಗಳಿಗೆ ಸಂಬಂಧಿಸಿದ ಅಂದಾಜು ಆಯ-ವ್ಯಯದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುವ ಕುರಿತು. |
| ನಿರ್ಣಯ: | 2025-26ನೇ ಸಾಲಿನ ವೇತನ ಭತ್ಯೆಗಳಿಗೆ ಹಾಗೂ ಪಿಂಚಣಿ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಅನುದಾನಗಳ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುವ ಬಗ್ಗೆ ಸಭೆಯ ಗಮನಕ್ಕೆ ಮಾನ್ಯ ಕುಲಸಚಿವರು ಹಾಗೂ ಹಣಕಾಸು ಅಧಿಕಾರಿಯವರು ತಂದರು.<br><br>ಸರ್ಕಾರದ ಪ್ರತಿನಿಧಿಗಳು ವೇತನಕ್ಕೆ ಸಂಬಂಧಿಸಿದ ವೇತನ ಭತ್ಯೆಗಳನ್ನು ಸಂಪೂರ್ಣವಾಗಿ ಬಿಡುಗಡೆ ಮಾಡಲಾಗುವುದೆಂದು ಮಾಹಿತಿಯನ್ನು ನೀಡಿದರು.<br><br>ಹೊರಗುತ್ತಿಗೆ ನೌಕರರುಗಳಿಗೆ ಸಂಬಂಧಿಸಿದಂತೆ ಕಡಿತಗೊಳಿಸುವಂತೆ ಹಿಂದಿನ ಸಭೆಯಲ್ಲಿ ಚರ್ಚಿಸಲಾಗಿದ್ದು, ಈ ಕುರಿತು ಸರ್ಕಾರದಿಂದಲೂ ವಿಶ್ವವಿದ್ಯಾಲಯಗಳಿಗೆ ನಿರ್ದೇಶನ ಬಂದಿದ್ದು, ಈ ಹಿನ್ನಲೆಯಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿಯನ್ನು ನೀಡಲು ಕೋರಿದರು. ಮಾನ್ಯ ಕುಲಸಚಿವರು ಈಗಾಗಲೇ ಟೆಂಡರ್ ಪ್ರಕ್ರಿಯೆ ಚಾಲನೆಯಲ್ಲಿದ್ದು, 109 ಹೊರಗುತ್ತಿಗೆ ನೌಕರರನ್ನು ಕಡಿತಗೊಳಿಸಲಾಗುವುದೆಂದು ಸಭೆಗೆ ಮಾಹಿತಿ ನೀಡಿದರು.<br><br>ಹೊರಗುತ್ತಿಗೆ ನೌಕರರುಗಳನ್ನು ಕಡಿತಗೊಳಿಸಿದ ಮಾಹಿತಿಯೊಂದಿಗೆ ಪುನ: ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಸಭೆಯು ಸಲಹೆ ನೀಡಿತು. |
| 2024-ಹಸ:2:05 | **Learning Management System(LMS) ಅನುಷ್ಠಾನದ ಬಿಡ್‌ನ ಅಂಗೀಕೃತಗೊಂಡ ಮೊತ್ತಕ್ಕೆ ಅನುಮೋದನೆ ಕುರಿತು.** |
| ನಿರ್ಣಯ: | Learning Management System(LMS) ಅನುಷ್ಠಾನದ ಬಿಡ್‌ನ ಅಂಗೀಕೃತಗೊಂಡ ಮೊತ್ತಕ್ಕೆ ಅನುಮೋದನೆಯನ್ನು ನೀಡಲು ಮಾನ್ಯ ಕುಲಸಚಿವರು ಕೋರಿದರು.<br><br>ದೂರ ಶಿಕ್ಷಣ ನಿರ್ದೇಶನಾಲಯದಲ್ಲಿ ಪ್ರಾರಂಭಿಸಲಾಗಿರುವ ಆನ್‌ಲೈನ್ ಪದವಿ ಕೋರ್ಸುಗಳ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಚಟುವಟಿಕೆಗಳನ್ನು ಆನ್ -ಲೈನ್ ಮೂಲಕ ನೀಡುವ Learning Management Systemನ್ನು (LMS) ಅಳವಡಿಸುವ ಕುರಿತು ವಿವಿಧ ಸಂಸ್ಥೆಗಳೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳಲು ಯು. ಜಿ. ಸಿ. ನಿಯಮಗಳಲ್ಲಿ ಅವಕಾಶವಿರುವ ಬಗ್ಗೆ ಹಾಗೂ ಸದರಿ ಸಂಸ್ಥೆಗಳು ಸರ್ಕಾರದಿಂದ ಅಂಗೀಕೃತಗೊಂಡಿರುವ ಬಗ್ಗೆ ಮಾಹಿತಿಯನ್ನು ಸಭೆಗೆ ನೀಡಲು ಸದಸ್ಯರು ಕೋರಿದರು.<br><br>ಯು. ಜಿ.ಸಿ ಪ್ರಕಟಣೆ ದಿನಾಂಕ: 04-09-2020ರಲ್ಲಿ (Open and Distance Learning Programmes and Online Programmes)ಗಳನ್ನು ನಡೆಸಲು ನಿಯಮಾವಳಿಯನ್ವಯ ಅವಕಾಶವಿರುವ ಕಾರಣ ಸದರಿ ಕೋರ್ಸ್‌ಗಳನ್ನು ಪ್ರಾರಂಭಿಸಲಾಗಿದೆ ಎಂದು ಮಾನ್ಯ ಕುಲಸಚಿವರು ಸಭೆಯ ಗಮನಕ್ಕೆ ತಂದರು.<br><br>ಸುಧೀರ್ಘ ಚರ್ಚಿಸಿದ ನಂತರ ಪ್ರಾರಂಭಿಸಲಾಗಿರುವ Open and Distance Learning Programmes and Online Programmes) ಅಡಿಯಲ್ಲಿ LMS ತಂತ್ರಾಂಶವು ಖಾಸಗಿ ಸಂಸ್ಥೆಗಳ ಸಹಭಾಗಿತ್ವಗಳೊಂದಿಗೆ ಅನುಷ್ಠಾನಗೊಳಿಸಲು ಯು. ಜಿ. ಸಿ. ಯಿಂದ ಅನುಮೋದನೆಯನ್ನು ಪಡೆದ ನಂತರ ಕಾರ್ಯಗತಗೊಳಿಸಲು ಸಭೆಯು ಸಲಹೆ ನೀಡಿತು. |

| | |
|---|---|
| | ಮಾನ್ಯಕುಲಸಚಿವರು ಸದರಿ ತಂತ್ರಾಶವನ್ನು ಅಳವಡಿಸಿಕೊಳ್ಳಲು ಯು. ಜಿ. ಸಿಗೆ ಅನುಮೋದನೆಯನ್ನು ಕೋರಿ ಪತ್ರಿಸಲಾಗುವುದೆಂದು ತಿಳಿಸಿದರು. ಸರ್ಕಾರದ ಪ್ರತಿನಿಧಿಗಳು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸದರಿ ತಂತ್ರಾಂಶಕ್ಕೆ ಯು. ಜಿ. ಸಿ ಅನುಮೋದನೆಯನ್ನು ಪಡೆಯುವ ಷರತ್ತಿಗೊಳಪಟ್ಟು ಅನುಮೋದಿಸಲಾಯಿತು. |
| 2024-ಹಸ:2:06 | **ಕುವೆಂಪು ವಿಶ್ವವಿದ್ಯಾಲಯದ ಆವರಣದಲ್ಲಿನ ವಿವಿಧ ಕಟ್ಟಡಗಳ ಮೇಲ್ಛಾವಣಿಯ ಮೇಲ್ಭಾಗದಲ್ಲಿ ಸೋಲಾರ್ ಫಲಕಗಳನ್ನು ಅಳವಡಿಸಿ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಬಗ್ಗೆ.** |
| ನಿರ್ಣಯ: | ಕುವೆಂಪು ವಿಶ್ವವಿದ್ಯಾಲಯದ ಆವರಣದಲ್ಲಿನ ವಿವಿಧ ಕಟ್ಟಡಗಳ ಮೇಲ್ಛಾವಣಿಯ ಮೇಲ್ಭಾಗದಲ್ಲಿ ಸೋಲಾರ್ ಫಲಕಗಳನ್ನು ಅಳವಡಿಸಿ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಕುರಿತು ಮಾನ್ಯ ಕುಲಸಚಿವರು ಸಭೆಗೆ ವಿವರಿಸಿದರು.<br><br>ಸಭೆಯು ಕೂಲಂಕಷವಾಗಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸದರಿ ಯೋಜನೆಗೆ ತಗುಲುವ ವೆಚ್ಚವನ್ನು ಯಾವ ಮೂಲದಿಂದ ಭರಿಸಲಾಗುವುದೆಂಬ ಬಗ್ಗೆ ಪ್ರಸ್ತಾಪವಿಲ್ಲವೆಂದು ಸಭೆಯು ತಿಳಿಸಿತು. ಮಾನ್ಯ ಕುಲಸಚಿವರು ಪ್ರಸ್ತುತ ವಿಶ್ವವಿದ್ಯಾಲಯದಲ್ಲಿ ಅನುದಾನದ ಕೊರತೆಯಿರುವುದರಿಂದ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಸಾಲ ಪಡೆದು ಈ ಯೋಜನೆಯನ್ನು ಕಾರ್ಯಗತಗೊಳಿಸಲಾಗುವುದೆಂದು ತಿಳಿಸಿದರು.<br><br>ಸರ್ಕಾರದ ಪ್ರತಿನಿಧಿಗಳು ಈ ಕುರಿತು ಆಕ್ಷೇಪಣೆ ವ್ಯಕ್ತಪಡಿಸಿ ಈ ಪ್ರಸ್ತಾವನೆಗೆ ಸರ್ಕಾರದ ಅನುಮೋದನೆಯನ್ನು ಪಡೆದ ನಂತರವೇ ಮುಂದುವರಿಯಬೇಕೆಂದು ಸಲಹೆ ನೀಡಿದರು.<br><br>ಈ ಯೋಜನೆಗೆ ಅವಶ್ಯವಿರುವ ಅನುದಾನವನ್ನು ಪಡೆಯಲು ಕೇಂದ್ರ ಸರ್ಕಾರದ ಯೋಜನೆಗಳಲ್ಲಿ ಅವಕಾಶವಿರುವ ಬಗ್ಗೆ ಪರಿಶೀಲಿಸಿ, ಅವಕಾಶವಿದ್ದಲ್ಲಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚಿಸಿದರು. |
| 2024-ಹಸ:207 | **ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು.**<br><br>**-ಯಾವುದೂ ಇರುವುದಿಲ್ಲ -** |
| | ಅಂತಿಮವಾಗಿ ಸಭೆಗೆ ಆಗಮಿಸಿ ತಮ್ಮ ಅತ್ಯಮೂಲ್ಯ ಸಲಹೆ/ ಸಹಕಾರಗಳನ್ನು ನೀಡಿದ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರುಗಳಿಗೆ ಹಣಕಾಸು ಅಧಿಕಾರಿಯವರು ವಂದಿಸಿದ ನಂತರ ಸಭೆಯು ಮುಕ್ತಾಯಗೊಂಡಿತು. |
| | (ಪ್ರೊ. ಹೆಚ್. ಎನ್.ರಮೇಶ್)<br>**ಹಣಕಾಸು ಅಧಿಕಾರಿ ಹಾಗೂ ಸದಸ್ಯ ಕಾರ್ಯದರ್ಶಿಗಳು**<br><br>ಸಹಿ/-<br>(ಪ್ರೊ. ಶರತ್ ಅನಂತಮೂರ್ತಿ)<br>**ಕುಲಪತಿಗಳು ಹಾಗೂ ಅಧ್ಯಕ್ಷರು** |